ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂಃ 21/2013**

ಪಿಡಬ್ಲ್ಯುಃ -1

<u>ದಿನಾಂಕಃ 04.06.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಎಂ ಎಸ್ ಜೆ ವಕೀಲರಿಂದಃ-</u>

ಮೃತ ಪ್ರತಿವಾದಿ ಅಬ್ದುಲ್ ರೆಹಮಾನ್ ಹಾಗೂ ಅವರ ಕುಟುಂಬದವರು ಸುಮಾರು 1962 ರಿಂದ ಅವರ ಮನೆಯಲ್ಲೇ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು 1962 ರಲ್ಲಿ ನಾನು ಹುಟ್ಟೇ ಇರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ವಾಸ ಮಾಡುತ್ತಿರುವ ಮನೆ ಹಳೆಯದಾಗಿದ್ದು ಅದು ಹಾಗೇ ಇದೆ ಎಂದರೆ ಸರಿ. ನನ್ನ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾಗ 92 ಸೆಂಟ್ ಖರೀದಿ ಮಾಡಿದ್ದರು ಎಂದರೆ ಸರಿ. ಈಗ ಅದು 81 ಸೆಂಟ್ ಇದೆ ಎಂದರೆ ಸರಿ, ಉಳಿದ ಜಾಗವನ್ನು ನನ್ನ ತಂದೆ ಮಾರಾಟ ಮಾಡಿದ್ದರು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 7 ರಲ್ಲಿ ದಾವಾ ಸ್ವತ್ತಿನಲ್ಲಿ ಸುಮಾರು 4 ಸೆಂಟ್ ಜಾಗವನ್ನು ಜೀನತ್, ಕೌಸಲ್ಯ ಕುಜ್ಞಿರಾಮನ್, ಜುಬೇದಾರವರು ಒತ್ತುವರಿ ಮಾಡಿದ್ದಾರೆ ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿಯವರ ವಿರುದ್ದ ನಾನು ಬೇರೆ ಬೇರೆ ದಾವೆ ಹಾಕಿದ್ದೇನೆ ಎಂದರೆ ಸರಿ. ಸದರಿ ದಾವೆಗಳೆಲ್ಲಾ ವಜಾ ಆಗಿವೆ ಎಂದರೆ ಸರಿ. ಇದೇ ದಾವಾ ಸ್ವತ್ತಿನ ಬಾಪ್ತು ನಾನು ಪ್ರತಿವಾದಿ 1(ಬಿ) ರವರ ವಿರುದ್ದ ಒ ಎಸ್ 62/19 ರಂತೆ ದಾವೆ ಸಲ್ಲಿಸಿದ್ದೆ ಎಂದರೆ ಸರಿ, ಸದರಿ ದಾವೆ ಕೂಡ ವಜಾ ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿ 1(ಬಿ) ರವರು ಈಗ ಹೊಸದಾಗಿ ಮನೆ ಕಟ್ಟಿಕೊಂಡು ಬೇರೆ ವಾಸವಿದ್ದಾರೆ ಎಂದರೆ ಸರಿ. ಸಾಮಾನ್ಯವಾಗಿ ಸಿ ಎಂ ಸಿ ಯವರ ಎಲ್ಲಾ ನಾರ್ಮ್ಸ್ ಅನ್ನು ಸರಿಯಾಗಿ ಪಾಲಿಸಿದ್ದರೆ ಮಾತ್ರ ಮನೆ ಅಥವಾ ಕಟ್ಟಡಗಳಿಗೆ ವಿದ್ಯುತ್ ಸೌಕರ್ಯ, ನೀರಿನ ಸೌಕರ್ಯ ನೀಡುತ್ತಾರೆ ಎಂದರೆ ಸರಿ. ಕ್ರಯಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿಯನ್ನೇ ನಾನು ದಾವಾ ಶೆಡ್ಯೂಲ್ ಸ್ವತ್ತಿಗೆ ಅದೇ ಚೆಕ್ಕುಬಂಧಿಯನ್ನು

ನಮೂದಿಸಿದ್ದೇನೆ ಎಂದರೆ ಸರಿ. ಖರೀದಿ ಮಾಡಿದ ನಂತರ ಒಂದು ಭಾಗವನ್ನು ನಿಮ್ಮ ತಂದೆಯವರು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ, ಹಾಗಾದರೆ ಆಗ ದಾವಾ ಸ್ವತ್ತಿನ ಚೆಕ್ಕು ಬಂಧಿ ಬದಲಾಗುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. 2018 ರಲ್ಲಿ ಕೊಡಗಿನಲ್ಲಿ ಲ್ಯಾಂಡ್ ಸ್ಲೈಡ್ ಆಗಿದ್ದು ಆಗ ದಾವಾ ಸ್ವತ್ತಿನಲ್ಲಿ ಪಶ್ಚಿಮ ಮತ್ತು ಉತ್ತರದ ಭಾಗದಲ್ಲಿ ಸ್ವಲ್ಪ ಭಾಗದಲ್ಲಿ ಭೂ ಕುಸಿತ ಆಗಿದೆ ಎಂದರೆ ಸರಿಯಲ್ಲ. ಆ ರೀತಿ ಭೂಕುಸಿತ ಆಗಿದ್ದರೂ ಕೂಡ ಅದನ್ನು ನಾನು ಸರಿ ಪಡಿಸಿಕೊಳ್ಳದೆ ಈಗಲೂ ಸಹ ಅದೇ ರೀತಿ ಉಳಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಾಪ್ತು ಆ ರೀತಿ ಭೂಕುಸಿತ ಆಗಿರುವ ಭಾಗವನ್ನು ನಾನು ಪ್ರತಿವಾದಿಗಳು ಕಬಳಿಸಿಕೊಂಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವರ ಸ್ವತ್ತನ್ನು ಯಾರಿಂದ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮೊದಲಿಗೆ ಪ್ರತಿವಾದಿಗಳು ಅವರ ಸ್ವತ್ತನ್ನು ಖರೀದಿ ಮಾಡಿದ್ದು ಆನಂತರ ನಾನು ದಾವಾ ಸ್ವತ್ತನ್ನು ಪೋಕಬ್ಬ ಎನ್ನುವವರಿಂದ ಖರೀದಿ ಮಾಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಒತ್ತುವರಿ ಆಗಿಲ್ಲದೆ ಇದ್ದರೂ ಸಹ ನಾನು ಪ್ರತಿವಾದಿ ಹಾಗೂ ಇತರರ ವಿರುದ್ಧ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಹಾಗೂ ಮೇಲೆ ಹೇಳಿದ ಇತರರಿಗೆ ತೊಂದರೆ ಮಾಡುವ ಸಲುವಾಗಿ ಈ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ತಂಟೆ ತಕರಾರು ಮಾಡಿಲ್ಲ ಎಂದರೆ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಒತ್ತುವರಿ ಮಾಡಿರುತ್ತಾರೆ ಆದ್ದರಿಂದ ನಾನು ಈ ದಾವೆ ಹೂಡಿದ್ದೇನೆ. 2009 ರಲ್ಲಿ ದಾವಾ ಸ್ವತ್ತನ್ನು ಸರ್ವೆ ಮಾಡಿಸುವಾಗ ಪ್ರತಿವಾದಿಗಳಿಗೆ ನೋಟಿಸ್ ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನೋಟಿಸನ್ನು ಎಲ್ಲರಿಗೂ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಆ ರೀತಿ ಪ್ರತಿವಾದಿಗಳಿಗೆ ಹಾಗೂ ಇತರರಿಗೆ ನೋಟಿಸ್ ನೀಡಿದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. 2009 ರಲ್ಲಿ ಸರ್ವೆ ಮಾಡಿಸಿದ ನಂತರ ದಾವಾ ಸ್ವತ್ತಿನ ವಿಸ್ತೀರ್ಣದಲ್ಲಿ ಕಡಿಮೆ ಆಗಿದೆ ಎಂದು ಹೇಳಿ ನೀವೇನಾದರು ನಿಮ್ಮ ಮಾರಾಟಗಾರರಾದ ಪೋಕಬ್ಬರವರಿಗೆ ಆಗಲಿ ಅಥವಾ ಅವರ ಕುಟುಂಬದವರಿಗಾಗಲಿ ವಿಚಾರ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ಯಾವುದೇ ಅಧಿಕೃತ ದಾಖಲೆಗಳು ಇಲ್ಲದೆ ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಗೂ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಆದ್ದರಿಂದ ಅವರ ವಿರುದ್ಧ ದಾವೆಯಲ್ಲಿ ಕೋರಿರುವಂತೆ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ಹಾಗೂ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**